ದಿನಾಂಕಃ 21.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ. ವೈ. ಎಲ್. ಡಿ ವಕೀಲರಿಂದಃ</u>**

ನನ್ನ ಅಜ್ಜನ ಹೆಸರು ಭೀಮಪ್ಪ. ನನ್ನ ಅಜ್ಜಿಯ ಹೆಸರು ಗೊತ್ತಿಲ್ಲ. ನನ್ನ ಅಜ್ಜ ಭೀಮಪ್ಪನಿಗೆ 04 ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳು. ಸದರಿ ಹೆಣ್ಣುಮಕ್ಕಳನ್ನು ಪ್ರಸ್ತುತ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ. ಅವರೆಂದರೆ 1.ಲಕ್ಷ್ಮವ್ವ ಗಂಡ ಸುಬ್ರಾಪ್ಪ ಮಾದರ, ಸಾ. ಪಟಗುಂದಿ, 2. ಲಕ್ಕವ್ವ ಗಂಡ ಭೀಮಪ್ಪ ಮಾದರ, ಸಾ. ಪಟಗುಂದಿ. ಸದರಿ ಇಬ್ಬರೂ ಹೆಣ್ಣುಮಕ್ಕಳು ತೀರಿಕೊಂಡಿರುತ್ತಾರೆ. ಅವರಿಗೆ ಮಕ್ಕಳು ಇರುತ್ತಾರೆ. ಲಕ್ಷ್ಮವ್ವಳಿಗೆ ಇಬ್ಬರು ಗಂಡು ಮಕ್ಕಳು. ಲಕ್ಕವ್ವಳಿಗೆ ಮೂವರು ಜನ ಗಂಡು ಮಕ್ಕಳು ಇರುತ್ತಾರೆ. ಸದರೀ ಲಕ್ಷ್ಮವ್ವ ಮತ್ತು ಲಕ್ಕವ್ವ ಈಗ ಸುಮಾರು 08-09 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ.

ದಾವಾ ಆಸ್ತಿಗಳು ಪಹಣಿಪತ್ರಿಕೆಗಳು ಪ್ರತಿವಾದಿಯರ ಹೆಸರಿನಲ್ಲಿ ಇರುತ್ತವೆ ಎಂದರೆ ನಿಜ. ಮುಂಚೆಯಿಂದಲೂ ದಾವಾ ಆಸ್ತಿಗಳ ಪಹಣಿಪತ್ರಿಕೆಗಳು ಪ್ರತಿವಾದಿಯರ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಅಜ್ಜ ಭೀಮಪ್ಪನ ಹೆಸರಿಗೆ ಪಹಣಿಪತ್ರಿಕೆಗಳು ಇದ್ದವು ಎಂದು ನುಡಿಯುತ್ತಾರೆ. ಆತ ತೀರಿಕೊಂಡ ನಂತರ ನಮ್ಮ ದೊಡ್ಡಪ್ಪನಾದ ಯಮನಪ್ಪನ ಹೆಸರಿಗೆ ದಾವಾ ಆಸ್ತಿಗಳು ದಾಖಲು ಆಗಿರುತ್ತವೆ. ನಮ್ಮ ದೊಡ್ಡಪ್ಪನ ಹೆಸರಿಗೆ ಆದ ಕಂದಾಯ ದಾಖಲೆಗಳನ್ನು ನಾವು ಪ್ರಶ್ನಿಸಿರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ನಮಗೆ 25 ಗುಂಟೆ ಜಮೀನು ಕಬ್ಜಾ ಕೊಟ್ಟಿದ್ದರು ಎಂದು ನುಡಿಯುತ್ತಾರೆ.

ಮೃತ ಯಲ್ಲಪ್ಪ , ನಮ್ಮ ತಂದೆ ಲಕ್ಕಪ್ಪ ಹಾಗೂ ಹನಮಪ್ಪ ಯಾವ ಕಾಲಕ್ಕೂ ದಾವಾ ಆಸ್ತಿಗಳ ಕಬ್ಜಾ ವಹಿವಾಟಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು 25 ಗುಂಟೆ ಜಮೀನಿನ ಕಬ್ಜೆಯಲ್ಲಿ ಇರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈಗ 5-6 ವರ್ಷಗಳ ಹಿಂದೆ ದಾವಾ ಆಸ್ತಿಗಳಲ್ಲಿ ಪಾಲು ಮಾಡಿಕೊಡುವಂತೆ ಪ್ರತಿವಾದಿಯರನ್ನು ಕೇಳಿರುತ್ತೇವೆ. ಅದಕ್ಕೆ ಪ್ರತಿವಾದಿಯರು ಪಾಲನ್ನು ಕೊಡಲು ಒಪ್ಪಿಕೊಂಡಿರುತ್ತಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಮ್ಮ ದೊಡ್ಡಪ್ಪನಾದ ಯಮನಪ್ಪನು ತೀರಿಕೊಂಡ ನಂತರ ದಾವಾ ಆಸ್ತಿಗಳಿಗೆ ಆತನ ಮಕ್ಕಳಾದ ಮಹಾದೇವ, ಭೀಮಪ್ಪ ಮತ್ತು ರಾಮಪ್ಪ ವಾರಸಾ ಮಾಡಿಕೊಂಡಿರುತ್ತಾರೆಂದರೆ ನಿಜ. ಪ್ರಸ್ತುತ ದಾವಾ ಆಸ್ತಿಗಳ ಕಬ್ಜೆಯಲ್ಲಿ 1 ರಿಂದ 10 ನೇ ಪ್ರತಿವಾದಿಯರು ಇರುತ್ತಾರೆಂದರೆ ಸರಿಯಲ್ಲ. ಸನ್ 1942 ರಿಂದ ಇಲ್ಲಿಯವರೆಗೆ ಪ್ರತಿವಾದಿಯರೇ ಕಬ್ಜೆಯಲ್ಲಿರುತ್ತಾರೆಂದರೆ ಸರಿಯಲ್ಲ. ಮುಂಚೆ ದಾವಾ ಜಮೀನುಗಳಲ್ಲಿ ಸಜ್ಜೆ ಬೆಳೆ ಬೆಳೆಯುತ್ತಿದ್ದೇವು. ಪ್ರಸುತ್ತ ಗೋವಿನ ಜೋಳ ಬೆಳೆ ಬೆಳೆಯುತ್ತಿದ್ದೇವೆ. ಗೋವಿನ ಜೋಳ ಬೆಳೆ ಬೆಳೆಯನ್ನು ಬೆಳೆಯುತ್ತಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಸದರಿ ಗೋವಿನ ಜೋಳ ನಮ್ಮ ಹೊಟ್ಟೆ ಪಾಡಿಗೆ ಆಗುತ್ತವೆ ಎಂದು ನುಡಿಯುತ್ತಾರೆ.

ನಾನು ಕಬ್ಜೆಯಲ್ಲಿರುತ್ತೇನೆಂದು ಹೇಳುತ್ತಿರುವ 25 ಗುಂಟೆ ಜಮೀನು ಚಕ್ಕುಬಂದಿ ಹೇಳುತ್ತೇನೆ. ಚಕ್ಕುಬಂದಿಯು ಪೂರ್ವಕ್ಕೆ- ಸಂಜು ಮಾದರ ಇವರ ಜಮೀನು, ಪಶ್ಚಿಮಕ್ಕೆ- ಲಕ್ಷ್ಮಣ ಮಾದರ ಇವರ ಜಮೀನು, ಉತ್ತರಕ್ಕೆ- ತಳಕಟನಾಳ ಗ್ರಾಮದ ಗಡಿ ಹಾಗೂ ದಕ್ಷಿಣಕ್ಕೆ-ಲಕ್ಷ್ಮಣ ಹುಲ್ಲಾರ ಇವರ ಜಮೀನು. ಸಾಕ್ಷಿಯು ಮುಂದುವರೆದು ಮೇಲೆ ಹೇಳಿದ ಚಕ್ಕುಬಂದಿಯು 01ಎಕರೆ 16 ಗುಂಟೆ ಜಮೀನಿಗೆ

ಸಂಬಂಧಿಸಿದ್ದು, ಸದರಿ ಜಮೀನಿನ ಪೈಕಿ ನಾವು ಮೂವರು ಜನ ಕಬ್ಜೆಯಲ್ಲಿ ಇರುತ್ತೇವೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಡೈರಿ ನಂಬರ 920 ಮಂಜೂರಾಗಿ 83 ವರ್ಷಗಳಾದರೂ ಸಹ ನಾವು ಇವತ್ತಿನವರೆಗೂ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆ ಹಾಗೂ ನಾನು ಪ್ರಶ್ನಿಸಿರುವುದಿಲ್ಲ ಎಂದು ನುಡಿದು, ನಾವು ಎಲ್ಲರೂ ಕೂಡಿಯೇ ಇರುತ್ತೇವೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಗಳು ನಮ್ಮ ದೊಡ್ಡಪ್ಪನ ಹೆಸರಿಗೆ ದಾಖಲಾಗುವ ಪೂರ್ವದಲ್ಲಿಯೇ ನಮ್ಮ ತಂದೆ ಹಾಗೂ ಆತನ ಸಹೋದರರು ಬೇರೆ ಬೇರೆಯಾಗಿ ವಾಸ ವಾಗಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನಮ್ಮ ದೊಡ್ಡಪ್ಪ ಮಾತ್ರ ಸಾಗುವಳಿ ಮಾಡಿಕೊಂಡು ಬಂದಿದ್ದು, ಆತನ ನಂತರ ಪ್ರತಿವಾದಿಗಳು ಸಾಗುವಳಿ ಮಾಡುತ್ತಿದ್ದು, ನಾವು ಯಾವ ಕಾಲಕ್ಕೂ ಸಹ ದಾವಾ ಆಸ್ತಿಗಳನ್ನು ಸಾಗುವಳಿ ಮಾಡಿರುವುದಿಲ್ಲ ಹಾಗೂ ನಮಗೆ ಯಾವುದೇ ರೀತಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ರೀತಿ ಹಕ್ಕು ಇರದೇ ಇದ್ದರೂ ಸಹ ಖೊಟ್ಟಿ ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಅಜ್ಜನಿಗೆ ದಾವಾ ಜಮೀನುಗಳನ್ನು ಚಾಕರಿ ಜಮೀನುಗಳನ್ನಾಗಿ ಕೊಟ್ಟಿದ್ದರು. ಚಾಕರಿ ಜಮೀನುಗಳು ಮನೆಯ ಹಿರಿಯ ಮಗನಿಗೆ ಬರುತ್ತವೆ ಎಂದರೆ ನಿಜ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ರೀತಿ ಹಕ್ಕು, ಹಿತಾಸಕ್ತಿ ಇರದೇ ಇದ್ದರೂ ಸಹ ನಾನು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ